Localised land under T. B. Project irrigated in Deodurg Taluk

180. Sri SADASHIVAPPA PATIL (Deodurg).—

Will the Chief Minister be pleased to state :—

(*a*) the number of acres of land localised under the Tungabhadra Project in Deodurg Taluk ;

(*b*) the number of acres of localised land actually irrigated in Deodurg Taluk ;

Sri D. PARAMESWARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)].—

(*a*) 2,977 Acres 35 Guntas.

(*b*) 304 Acres 01 Gunta.

ಶ್ರೀ ಸದಾಶಿವಪ್ಪ ಪಾಟೀಲ್.—ಉತ್ತರದಲ್ಲಿ ಹೇಳಿರುವಂತೆ 2,977 ಎಕರೆ 35 ಗುಂಟೆ ಮತ್ತು 304 ಎಕರೆಗಳು ಒಂದು ಗುಂಟೆ ನೀರಾವರಿಯಾಗಿರುವುದು ಯಾವ ಯಾವ ಗ್ರಾಮಗಳಲ್ಲಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಇದಕ್ಕೆ ನೋಟೀಸು ಬೇಕು.

ಶ್ರೀ ಸದಾಶಿವಪ್ಪ ಪಾಟೀಲ್.—ಇಷ್ಟು ಎಕರೆ ನೀರಾವರಿಯಾಗಿದೆ ಎಂದು ಕೇಳುವಾಗ ಯಾವ್ಯಾವ ಗ್ರಾಮಗಳು ಎಂದು ಬರುವುದಿಲ್ಲವೇ ? ಇದಕ್ಕಾಗಿ ನೋಟೀಸು ಬೇಕು ?

ಶ್ರೀ ಡಿ. ಪರಮೇಶ್ವರಪ್ಪ.—ಇಲ್ಲಿ ಕೇಳಿರುವ ಪ್ರಶ್ನೆ ಗ್ರಾಮಗಳ ಬಗ್ಗೆ ಇಲ್ಲ. ಎಕ್ಸ್‌ಟೆಂಟು ಎಷ್ಟು ಎಂದು ಕೇಳಿರುವುದರಿಂದ ವಿವರಗಳನ್ನು ಕೊಡಲಾಗಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ದೇವದುರ್ಗದಲ್ಲಿ 2,977 ಎಕರೆಗಳು ಎಂದು ನಿಮಗೆ ಯಾವ ಇಲಾಖೆಯವರು ವರದಿ ಕಳುಹಿಸಿದ್ದಾರೆ ?

ಶ್ರೀ ಡಿ. ಪರಮೇಶ್ವರಪ್ಪ.—ನಮಗೆ ಬಂದಿರುವ ಇನ್‌ಫರ್‌ಮೇಷನ್ ರೆವೆನ್ಯೂ ಇಲಾಖೆಯಿಂದ.

ಶ್ರೀ ಸದಾಶಿವಪ್ಪ ಪಾಟೀಲ್.—ನನಗೆ 15 ದಿನಗಳಿಗೆ ಮುಂಚೆ ಕೆನಾಲ್ ಡಿವಿಜನ್‌ನವರು ಒಂದು ಪಟ್ಟಿ ಕೊಟ್ಟರು. ಇದರಲ್ಲಿರುವಂತೆ ಸುಮಾರು 540 ಎಕರೆಗಳಷ್ಟು ನೀರಾವರಿ ಆಗಿದೆ ಎಂದು ಇದೆ. ಹೀಗೆ ಫಾನಲ್ ಡಿವಿಜನ್‌ನವರು ಹೇಳುವ ಮಾತು ಕೇಳಬೇಕೋ ಇಲ್ಲವೇ ರೆವನ್ಯೂ ಇಲಾಖೆಯ ಮಾತು ಕೇಳಬೇಕೋ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸರಕಾರ ಸರಿಯಾಗಿ ತಿಳಿಸುತ್ತಾರೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ವಾಟರ್ ಸಪ್ಲೈ ಮಾಡುವವರು ಕೆನಾಲ್ ಡಿವಿಜನ್‌ನವರು. ನೀರು ಬೇಕು ಎಂದು ಕೇಳಬೇಕಾದರೆ ಕೆನಾಲ್ ಡಿವಿಜನ್‌ನವರನ್ನೇ ಕೇಳಬೇಕು.

ಶ್ರೀ ಎಂ. ನಾಗಪ್ಪ.—ಮಾನ್ಯ ಮಂತ್ರಿಗಳು ಕೊಟ್ಟಂತ ಉತ್ತರವಿಂದ ಒಂದು ಪ್ರಶ್ನೆ ಇಲ್ಲಿ ಕೇಳಬೇಕಾಗಿದೆ. ತಮ್ಮ ಗಮನಕ್ಕೆ ಬಂದಿರುವಂತೆ ಇರಿಗೇಷನ್ ಡಿಪಾರ್ಟ್‌ಮೆಂಟಿನವರು ಕೊಟ್ಟ ಅಂಕೆ ಸಂಖ್ಯೆಗಳಿಗೂ ರೆವೆನ್ಯೂ ಇಲಾಖೆ ಕೊಟ್ಟ ಅಂಕೆ ಸಂಖ್ಯೆಗಳಿಗೂ ವ್ಯತ್ಯಾಸ ಇದೆ. ನಮ್ಮ ತುಂಗಭದ್ರಾ ಆಯಕಟ್ಟಿನಲ್ಲಿ ಇರಿಗೇಷನ್ ಎಷ್ಟು ಆಗಿದೆ ಲೋಕಲೈಸ್ ಡೆವಲಪ್‌ಮೆಂಟು ಎಷ್ಟು ಆಗಿದೆ ಎನ್ನುವುದರ ಬಗ್ಗೆ ಸರಿಯಾದ ವರದಿ ಯಾವ ಡಿಪಾರ್ಟ್‌ಮೆಂಟಿನಲ್ಲೂ ಇಲ್ಲ. ಏಕೆಂದರೆ ರೆವೆನ್ಯೂ ಡಿಪಾರ್ಟ್‌ಮೆಂಟು ಕೊಡುವ ಲಿಸ್ಟೇ ಬೇರೆ, ಅಡ್ಮಿನಿಸ್ಟ್ರೇಷನ್ ಕೊಡುವ ಲಿಸ್ಟೇ ಬೇರೆ. ಹೀಗೆ ಇವೆರಡು ಇಲಾಖೆಗಳು ಕೊಡುವ ಲಿಸ್ಟಿನಲ್ಲಿ ವ್ಯತ್ಯಾಸ ಇರಲು ಕಾರಣವೇನು ? ಇದನ್ನು ಸರಿಪಡಿಸುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಯಾವ ಯಾವ ಇಲಾಖೆಗಳಲ್ಲಿ ಇನ್‌ಫರ್‌ಮೇಷನ್ ಇದೆಯೋ ಅದನ್ನು ತರಿಸಿಕೊಂಡು ಪರಿಶೀಲನೆಬೇಕಾಗಿದೆ.

ಶ್ರೀ ನದಾತಿವಪ್ಪ ವಾಟೀರ್.—ಸ್ವಾಮಿ, ಕೆನಾಲ್ ಡಿವಿಷನ್‌ನವರು ಎಷ್ಟು ಎಕರೆಗೆ ನೀರಾವರಿ ಆಗಬೇಕಾಗಿತ್ತು ಎಂದು ಹೇಳಿದರು? ಇದುವರೆಗೆ ಯಾವುದೂ ಫೀಲ್ಡ್‌ಛಾನಲ್ಸ್ ಆಗಲು ಯಾವುದೂ ಆಗಿಲ್ಲ. ರೈತರಿಗೆ ವಾಟರ್ ಟ್ಯಾಕ್ಸ್ ಕಟ್ಟಬೇಕೆಂದು ರೆವಿನ್ಯೂ ಡಿಪಾರ್ಟ್‌ಮೆಂಟ್ ನವರು ನೋಟೀಸ್ ಜಾರಿ ಮಾಡಿದ್ದಾರೆ. ಆದರೆ ಕೆನಾಲ್ ಡಿಪಾರ್ಟ್‌ಮೆಂಟಿಗೆ ಇದು ರೋಕರೆನ್ಸ್ ಆಗಿಲ್ಲ, ಆದುದರಿಂದ ಯಾವ ಫೀಲ್ಡ್ ಛಾನಲ್ಸ್ ಕೂಡ ಮಾಡುವುದಕ್ಕೆ ತಯಾರಾಗಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ಏನು ಹೇಳುತ್ತೀರಿ?

Sri D. PARAMESWARAPPA.—According to my information the field channels have all been constructed but the people are not forthcoming.

Starting of Seed Multiplication Farm in the S. K. V. D. High School Land

785. Sri B. GANGANNA (Kallambella).—

Will the Minister for Agriculture be pleased to state :—

(*a*) whether there is any proposal to take over the farm land of S.K V.D. High School, Chikkanahalli, Sira taluk from the Education Department to the control of the Agricultural Department to start a seed multiplication farm ;

(*b*) if so, when the seed multiplication farm would be started at Chikkanahalli, Sira taluk ?

Sri D. B. PAWAR (Deputy Minister for Agriculture).—

(*a*) Yes.

(*b*) As early as possible.

ಶ್ರೀ ಬಿ. ಗಂಗಣ್ಣ — ಸ್ವಾಮಿ, (ಅ) ಗೆ ಉತ್ತರವಾಗಿ ಅವಶ್ಯ ಜಾಗ್ರತೆ ಎಂದು ಹೇಳಿದ್ದೀರಿ. ಮತ್ತು 8-10 ವರ್ಷದಿಂದಲೂ ಇದರ ಬಗ್ಗೆ ಕೋರಿಕೆ ಸಲ್ಲಿಸಿದ್ದರೂ ಕೂಡ ಇದುವರೆಗೂ ಏನೂ ಆಗಿಲ್ಲ. ಆದುದರಿಂದ 1969-70 ಕ್ಕಾದರೂ ಇದನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

† Sri D. B. PAWAR.—These lands are in the possession of the Education Department and we have moved the Department to hand over these lands to the Agriculture Department and no sooner it is done we will take over the lands and start the seed farm.

ಶ್ರೀ ಬಿ. ಗಂಗಣ್ಣ.— ಇದು ವಿದ್ಯಾ ಇಲಾಖೆ ಕ್ಷೇತ್ರವಲ್ಲದ್ದರೂ ಕೂಡ ಹಿಂದೆ ವ್ಯವಸಾಯ ಇಲಾಖೆಗೆ ಸೇರಿತ್ತು. ಕಾರಣಾಂತರದಿಂದ ಅನಿವಾರ್ಯವಾಗಿ ಇದು ವಿದ್ಯಾ ಇಲಾಖೆಗೆ ಸೇರಿತ್ತು. ಆದುದರಿಂದ ಈಗಲಾದರೂ ಈ ವಿದ್ಯಾ ಇಲಾಖೆಗೆ ಸೇರಿರುವ ಜಮೀನನ್ನು ತಮ್ಮ ವಶಕ್ಕೆ ತೆಗೆದು ಕೊಂಡು ಅಲ್ಲಿ ಸೀಡ್ ಫಾರಂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

Sri D. B. PAWAR.—It is true that these lands were the property of the Agriculture Department sometime back, in the year 1954. Since Agriculture was introduced as one of the electives in the Education Department, the lands were handed over to the Education Department in the year 1954. Now it is learnt that the subject of